# 2005

# LAW

## Paper 1

*Time : 3 Hours ]* *[ Maximum Marks : 300*

---

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟವಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

1. (a) Explain the 'Doctrine of Pleasure' under the Indian Constitution.

   (b) State the essential features of a Federal Constitution.

   (c) Who are the subjects of International law ?

   (d) Elucidate the territorial jurisdiction of a State.

## ಭಾಗ A

4×5=20

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಭಾರತೀಯ ಸಂವಿಧಾನದ ಪ್ರಕಾರ 'ಇಷ್ಟಾನುಸಾರ ಸಿದ್ಧಾಂತ' (Doctrine of Pleasure) ಎಂದರೇನು ? ವಿವರಿಸಿ.

(ಬಿ) ಸಂಯುಕ್ತ ಸಂವಿಧಾನದ ಅವಶ್ಯಕ ಲಕ್ಷಣಗಳೇನು ? ತಿಳಿಸಿ.

(ಸಿ) ಅಂತರರಾಷ್ಟ್ರೀಯ ಕಾನೂನಿಗೆ ಒಳಪಡುವ ಪ್ರಜೆಗಳು ಯಾರು ?

(ಡಿ) ರಾಜ್ಯವೊಂದರ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ವಿವರಿಸಿ.

## PART B

*10×10=100*

*Answer each question in about 100 words. Each question carries 10 marks.*

1

1. Explain the definition of 'State' for the purposes of fundamental rights.

2. State briefly the facets of the principles of natural justice.

3. Explain the doctrine of 'Classification'. State its influence and impact on Art. 14 of the Constitution.

4. Discuss the different modes of the amendment of the Indian Constitution.

5. Distinguish between 'Fundamental Rights' and 'Directive Principles of State Policy.'

6. What is *piracy jure gentium* ? How is it dealt with by States ?

7. Explain the theories regarding the relation between International Law and Municipal Law.

8. What are the different types of state recognition ? What is the legal effect of recognition ?

9. What is meant by 'Extradition' ? Mention the conditions required to be satisfied for it.

10. Explain the powers and functions of the Security Council, with reference to maintenance of international peace and security.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

ಮೂಲಭೂತ ಹಕ್ಕುಗಳ ಉದ್ದೇಶಕ್ಕಾಗಿ 'ರಾಜ್ಯ' ಎಂಬುದರ ಸೂತ್ರರೂಪದ ವಿವರಣೆ ಏನು ? ವಿವರಿಸಿ.

ಸ್ವಾಭಾವಿಕ ನ್ಯಾಯದ ತತ್ವಗಳ ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

ವರ್ಗೀಕರಣದ ಸಿದ್ಧಾಂತವನ್ನು ಕುರಿತು ಬರೆಯಿರಿ. ಸಂವಿಧಾನದ ಅನುಚ್ಛೇದ 14 ಮೇಲೆ ಅದರ ಪ್ರಭಾವ ಮತ್ತು ಪರಿಣಾಮಗಳನ್ನು ವಿವರಿಸಿ.

ಭಾರತೀಯ ಸಂವಿಧಾನದ ತಿದ್ದುಪಡಿಯ ವಿವಿಧ ಬಗೆಗಳನ್ನು ಕುರಿತು ಚರ್ಚಿಸಿ.

'ಮೂಲಭೂತ ಹಕ್ಕುಗಳು' ಮತ್ತು 'ಪ್ರಭುತ್ವ ನೀತಿಯ ನಿರ್ದೇಶಕ ತತ್ವಗಳು' ನಡುವಿನ ವ್ಯತ್ಯಾಸಗಳೇನು ? ಸ್ಪಷ್ಟಪಡಿಸಿ.

*Piracy jure gentium* ಎಂದರೇನು ? ರಾಜ್ಯಗಳು ಇದರ ಬಗ್ಗೆ ಹೇಗೆ ವ್ಯವಹರಿಸುತ್ತವೆ ?

ಅಂತರರಾಷ್ಟ್ರೀಯ ಕಾನೂನು ಮತ್ತು ಮುನಿಸಿಪಲ್ ಕಾನೂನು ಇವುಗಳ ಸಂಬಂಧ ಕುರಿತಂತೆ ಇರುವ ಸಿದ್ಧಾಂತಗಳನ್ನು ವಿವರಿಸಿ.

ರಾಜ್ಯಗಳ ಮನ್ನಣೆಯ ವಿವಿಧ ಬಗೆಗಳು ಯಾವುವು ? ಈ ಮನ್ನಣೆಯ ಕಾನೂನು ಪರಿಣಾಮ ಯಾವ ರೀತಿಯದು ?

'ಪ್ರತ್ಯಾರ್ಪಣ (Extradition)' ಎಂದರೇನು ? ಇದನ್ನು ಪೂರೈಸುವುದಕ್ಕೆ ಅಗತ್ಯವಾದ ಷರತ್ತುಗಳು ಯಾವುವು ? ತಿಳಿಸಿ.

ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತಾ ಪಾಲನೆಗೆ ಸಂಬಂಧಿಸಿದಂತೆ ಭದ್ರತಾ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳೇನು ಎಂಬುದನ್ನು ವಿವರಿಸಿ.

## PART C

*6×15=90*

*Answer each question in about 150 words. Each question carries 15 marks.*

**1.** (a) "The power to make laws and the powers to levy taxes are separately enumerated in the Indian Constitution." — Elucidate.

(b) In a state, the entire road transport was run by the state, as it was managed departmentally. But, later, under a law passed by the State Legislature, a State Road Transport Corporation was brought into existence. The new corporation is asked to pay income tax. The state claims immunity under Art. 289 of the Constitution. Decide, giving reasons.

**2.** (a) Discuss the scope and content of ordinary original civil jurisdiction of the Supreme Court under Art. 131 of the Constitution.

(b) The State of Karnataka entered into a contract with the Union of India to supply sandalwood products of a certain quality for a fixed price. The contract complied with Art. 299 of the Constitution of India. There was anticipatory breach of the contract on the part of the Union of India. The Government of Karnataka filed a suit under Art. 131 of the Constitution, claiming for an order of specific performance. Decide, giving points of arguments for both parties.

**3.** (a) Discuss the fundamental rights available to a detenu.

(b) Mr. A was detained under the National Security Act on the solitary ground that "he was a member of X political party". On what grounds would you challenge the detention ? Mention the fora before which you will take up the matter.

**4.** (a) Discuss passing of rights and obligations upon external changes of sovereignty over territory.

(b) The British ship *'Columbus'* collided with the Indian ship *'Gameland'* on the High Seas, due to the negligence of an officer on board *'Columbus'*. As a result, *'Gameland'* sank and 20 Indians died. The Indian Government wants to claim compensation. Advise on the issue of jurisdiction.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**1.** (a) "ಭಾರತೀಯ ಸಂವಿಧಾನದಲ್ಲಿ, ಕಾನೂನನ್ನು ರೂಪಿಸುವ ಅಧಿಕಾರ ಮತ್ತು ತೆರಿಗೆಗಳನ್ನು ವಿಧಿಸುವ ಅಧಿಕಾರ ಇವುಗಳನ್ನು ಪ್ರತ್ಯೇಕವಾಗಿ ನಿರೂಪಿಸಲಾಗಿದೆ." — ವಿಶ್ಲೇಷಿಸಿ.

(b) ರಾಜ್ಯವೊಂದರಲ್ಲಿ, ಇಡೀ ರಸ್ತೆ ಸಾರಿಗೆ ವಿಷಯವನ್ನು ರಾಜ್ಯವೇ ನೋಡಿಕೊಳ್ಳುತ್ತಿತ್ತು. ಏಕೆಂದರೆ ಅದನ್ನು ಇಲಾಖೆಯ ಮೂಲಕ ನಿರ್ವಹಿಸಲಾಗುತ್ತಿತ್ತು. ಆದರೆ ಆನಂತರ, ರಾಜ್ಯ ಶಾಸಕಾಂಗವು ಒಂದು ಕಾನೂನನ್ನು ಜಾರಿಗೊಳಿಸಿ, ಅದರ ಅನ್ವಯ ಒಂದು ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಅಸ್ತಿತ್ವಕ್ಕೆ ತಂದಿತು. ಹೊಸ ನಿಗಮವನ್ನು ಆದಾಯ ತೆರಿಗೆ ಸಲ್ಲಿಸುವಂತೆ ಕೇಳಲಾಯಿತು. ರಾಜ್ಯವು ಸಂವಿಧಾನದ 289 ನೇ ಅನುಚ್ಛೇದದ ಕೆಳಗೆ ಕಾನೂನು ಕ್ರಮದಿಂದ ಉನ್ಮುಕ್ತಿಯನ್ನು ಕೇಳುತ್ತದೆ. ಕಾರಣಗಳೊಂದಿಗೆ ಇದನ್ನು ನಿರ್ಧರಿಸಿ.

**2.** (a) ಸಂವಿಧಾನದ ಅನುಚ್ಛೇದ 131 ರ ಅನ್ವಯ ಸರ್ವೋಚ್ಚ ನ್ಯಾಯಾಲಯದ ಸಾಮಾನ್ಯ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಉದ್ದೇಶ ಮತ್ತು ವಿಷಯವನ್ನು ಕುರಿತಂತೆ ಚರ್ಚಿಸಿ.

(b) ಕರ್ನಾಟಕ ರಾಜ್ಯವು ಕೆಲವೊಂದು ಗುಣಮಟ್ಟದ ಶ್ರೀಗಂಧದ ವಸ್ತುಗಳನ್ನು ನಿಶ್ಚಿತ ಬೆಲೆಗೆ ಸರಬರಾಜು ಮಾಡುವ ಬಗ್ಗೆ ಭಾರತ ಸರ್ಕಾರದೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿತು. ಈ ಒಪ್ಪಂದವು ಭಾರತೀಯ ಸಂವಿಧಾನದ ಅನುಚ್ಛೇದ 299 ಗೆ ಅನುಗುಣವಾಗಿತ್ತು. ಭಾರತ ಸರ್ಕಾರದ ಕಡೆಯಿಂದ ಈ ಒಪ್ಪಂದದ ನಿರೀಕ್ಷಣಾ ಉಲ್ಲಂಘನೆ ನಡೆಯಿತು. ಆಗ ಕರ್ನಾಟಕ ಸರ್ಕಾರವು, ಸಂವಿಧಾನದ 131 ನೇ ಅನುಚ್ಛೇದದ ಅನ್ವಯ ನಿರ್ದಿಷ್ಟ ಕರಾರು ಪಾಲನೆಯ ಆದೇಶವನ್ನು ಕೋರಿ ಒಂದು ದಾವೆಯನ್ನು ಹಾಕಿತು. ಈ ಎರಡೂ ಪಕ್ಷಗಳಿಗೆ ಸಂಬಂಧಿಸಿದಂತೆ ವಾದಾಂಶಗಳನ್ನು ಮಂಡಿಸಿ ನಿರ್ಧಾರಮಾಡಿ.

**3.** (a) ಬಂಧಿತರಿಗೆ ಲಭ್ಯವಿರುವ ಮೂಲಭೂತ ಹಕ್ಕುಗಳನ್ನು ಕುರಿತು ಚರ್ಚಿಸಿ.

(b) ಶ್ರೀ A ಎಂಬಾತನು "X ರಾಜಕೀಯ ಪಕ್ಷದ ಸದಸ್ಯನಾಗಿದ್ದ" ಎಂಬ ಏಕೈಕ ಆಧಾರದ ಮೇಲೆ ಆತನನ್ನು ರಾಷ್ಟ್ರೀಯ ಭದ್ರತಾ ಕಾಯಿದೆಯ ಅನ್ವಯ ಸ್ಥಾನಬದ್ಧತೆಯಲ್ಲಿಡಲಾಯಿತು. ಈ ಸ್ಥಾನಬದ್ಧತೆಯನ್ನು ಯಾವ ಆಧಾರದ ಮೇಲೆ ನೀವು ಪ್ರಶ್ನಿಸುತ್ತೀರಿ ? ಈ ವಿಷಯವನ್ನು ಯಾವ ನ್ಯಾಯಾಧಿಕರಣದ ಮುಂದೆ ಇಡುತ್ತೀರಿ ? ತಿಳಿಸಿ.

**4.** (a) ಒಂದು ಪ್ರದೇಶದ ಸಾರ್ವಭೌಮತೆಯ ಹೊರವಲಯದ ಬದಲಾವಣೆಗಳ ಮೇಲೆ ಹಕ್ಕು ಮತ್ತು ಬಾಧ್ಯತೆಗಳನ್ನು ಹೇಗೆ ಅನ್ವಯಿಸುತ್ತೀರಿ ? ಚರ್ಚಿಸಿ.

(b) "*ಕೊಲಂಬಸ್*" ಎಂಬ ಬ್ರಿಟಿಷ್ ನೌಕೆಯು ಆ ಹಡಗಿನಲ್ಲಿದ್ದ ಒಬ್ಬ ಅಧಿಕಾರಿಯ ಅಲಕ್ಷ್ಯದಿಂದಾಗಿ, ನಡುಗಡಲಿನಲ್ಲಿ ಅದು ಭಾರತದ '*ಗಾಮ್‌ಲ್ಯಾಂಡ್*' ಎಂಬ ನೌಕೆಗೆ ಡಿಕ್ಕಿ ಹೊಡೆಯಿತು. ಇದರ ಪರಿಣಾಮವಾಗಿ *ಗಾಮ್‌ಲ್ಯಾಂಡ್* ಕಡಲಿನಲ್ಲಿ ಮುಳುಗಿತು ಮತ್ತು 20 ಮಂದಿ ಭಾರತೀಯರು ಮೃತರಾದರು. ಈ ಸಂಬಂಧವಾಗಿ ಭಾರತ ಸರ್ಕಾರ ಪರಿಹಾರವನ್ನು ಕೋರಲು ಇಚ್ಛಿಸುತ್ತದೆ. ಅಧಿಕಾರ ವ್ಯಾಪ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಸಲಹೆಗಳನ್ನು ಕೊಡಿ.

11/1

**5.** (a) Explain the rights and duties of States with regard to aliens.

(b) Mr. Albert, a British national, along with a hundred men made preparations to commit piracy on the high seas. But, the attempt failed due to a U.S. warship's entry into that area. The pirate ship landed on Indian soil. Albert and his men are arrested and tried in Indian courts. Albart contends that Indian courts have no jurisdiction as they have not committed any wrong. Advise the Indian Government.

**6.** (a) Enumerate and explain the different methods of peaceful settlement of international disputes.

(b) Mr. Ratel, a sailor was surrendered by Great Britain to the United States of America, upon a charge of murder of Frederick. The American court tried and convicted Ratel for a minor charge of inflicting cruel and unusual punishment on Frederick. Examine the validity of the extradition, trial and conviction.

5. (a) ಅನ್ಯದೇಶೀಯರಿಗೆ ಸಂಬಂಧಿಸಿದಂತೆ, ಒಂದು ರಾಜ್ಯದ ಹಕ್ಕು ಮತ್ತು ಕರ್ತವ್ಯಗಳನ್ನು ಕುರಿತು ವಿವರಿಸಿ.

(b) ಬ್ರಿಟಿಷ್ ರಾಷ್ಟ್ರೀಯನಾದ ಆಲ್ಬರ್ಟ್ ಎಂಬಾತ ಒಂದು ನೂರು ಮಂದಿಯೊಂದಿಗೆ ಕೂಡಿಕೊಂಡು ನಡುಗಡಲಿನಲ್ಲಿ, ಕಡಲ್ಗಳ್ಳತನ ನಡೆಸಲು ಸಿದ್ಧತೆ ಮಾಡಿದ. ಅದರೆ ಆ ಪ್ರದೇಶದಲ್ಲಿ ಸಂಯುಕ್ತ ಸಂಸ್ಥಾನದ ಯುದ್ಧ ನೌಕೆಯ ಪ್ರವೇಶದಿಂದಾಗಿ ಅತನ ಯತ್ನಗಳು ವಿಫಲವಾದವು. ಕಳ್ಳರ ನೌಕೆಯು ಭಾರತದ ದಡಕ್ಕೆ ಬಂದು ಸೇರಿತು. ಅಲ್ಬರ್ಟ್ ಮತ್ತು ಆತನ ಅನುಚರರನ್ನು ಬಂಧಿಸಿ, ಭಾರತೀಯ ನ್ಯಾಯಾಲಯದಲ್ಲಿ ಅವರ ವಿಚಾರಣೆ ನಡೆಸಲಾಯಿತು. ತಾವು ಯಾವುದೇ ತಪ್ಪು ಮಾಡಿಲ್ಲವಾದ್ದರಿಂದ ಭಾರತೀಯ ನ್ಯಾಯಾಲಯಗಳಿಗೆ ಈ ಬಗ್ಗೆ ಯಾವುದೇ ಅಧಿಕಾರವಿಲ್ಲ ಎಂದು ಆಲ್ಬರ್ಟ್ ವಾದಿಸಿದ. ಈ ಬಗ್ಗೆ ಭಾರತೀಯ ಸರ್ಕಾರಕ್ಕೆ ನೀವು ಯಾವ ಸಲಹೆ ಕೊಡುತ್ತೀರಿ ?

6. (a) ಅಂತರರಾಷ್ಟ್ರೀಯ ವಿವಾದಗಳನ್ನು ಶಾಂತಿಯುತವಾಗಿ ಇತ್ಯರ್ಥಪಡಿಸುವ ವಿವಿಧ ವಿಧಾನಗಳನ್ನು ನಿರೂಪಿಸಿ ಮತ್ತು ವಿವರಿಸಿ.

(b) ಫ್ರೆಡರಿಕ್ ಎಂಬಾತನ ಕೊಲೆಯ ಸಂಬಂಧವಾಗಿ ರ್‍ಯಾಟೆಲ್ ಎಂಬ ನಾವಿಕನನ್ನು ಬ್ರಿಟನ್ ದೇಶವು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಒಪ್ಪಿಸಿತು. ಅಮೆರಿಕಾದ ನ್ಯಾಯಾಲಯವು ವಿಚಾರಣೆ ನಡೆಸಿ ಫ್ರೆದರಿಕ್‌ನ ಮೇಲೆ ಕ್ರೂರ ಮತ್ತು ವಿಚಿತ್ರವಾದ ವೇದನೆ ಹೇರಿದ ಎಂಬ ಸಣ್ಣ ಆರೋಪದ ಮೇಲೆ ರ್‍ಯಾಟೆಲ್‌ನನ್ನು ಅಪರಾಧಿ ಎಂದು ತೀರ್ಮಾನಿಸಿತು. ಪ್ರತ್ಯಾರ್ಪಣ, ವಿಚಾರಣೆ ಮತ್ತು ಬಂಧನದ ಸಿಂಧುತ್ವ ಕುರಿತು ಪರಿಶೀಲಿಸಿ.

## PART D

*3×30=90*

*Answer any **three** of the following questions, each in about 300 words. Each question carries 30 marks.*

**1.** Discuss the scope and content of the freedom of the press in the light of judicial pronouncements of the Supreme Court of India.

**2.** Explain briefly the appellate jurisdiction of the Supreme Court of India.

**3.** Explain critically the doctrines invoked by the Supreme Court to resolve legislative conflicts between the Union and the States.

**4.** Explain the material 'sources' of International Law. In what order are these material 'sources' used for ascertaining the law on a given matter ?

**5.** Discuss the nature and scope of state responsibility. Will there be any state responsibility in case of breach of a treaty or breach of contractual obligations ?

## ಭಾಗ D

3×30=90

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

1. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯ ತೀರ್ಪುಗಳ ಹಿನ್ನೆಲೆಯಲ್ಲಿ ಸುದ್ದಿ ಮಾಧ್ಯಮದ ಸ್ವಾತಂತ್ರ್ಯದ (Freedom of Press) ವ್ಯಾಪ್ತಿ ಹಾಗೂ ಅದರ ವಸ್ತು ಕುರಿತು ಚರ್ಚಿಸಿ.

2. ಭಾರತದ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.

3. ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನಾತ್ಮಕ ಘರ್ಷಣೆಗಳನ್ನು ಪರಿಹರಿಸುವ ಸಂಬಂಧವಾಗಿ ಸರ್ವೋಚ್ಚ ನ್ಯಾಯಾಲಯವು ಅನುಸರಿಸಿದ ತತ್ವ ಸಿದ್ಧಾಂತಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

4. ಅಂತರರಾಷ್ಟ್ರೀಯ ಕಾನೂನಿನ ಸಾಮಗ್ರಿ ಮೂಲಗಳನ್ನು ವಿವರಿಸಿ. ನಿರ್ದಿಷ್ಟ ವಿಷಯವೊಂದರ ಕಾನೂನಿನ ಅಂಶವನ್ನು ನಿರ್ಧರಿಸುವಲ್ಲಿ ಅದು ಈ ಸಾಮಗ್ರಿ ಮೂಲಗಳನ್ನು (Material sourses) ಯಾವ ಕ್ರಮದಲ್ಲಿ ಬಳಸಿಕೊಳ್ಳುತ್ತದೆ ಎಂಬುದನ್ನು ವಿವರಿಸಿ.

5. 'ರಾಜ್ಯ ಜವಾಬ್ದಾರಿ' ಯ ಸ್ವರೂಪ ಮತ್ತು ವ್ಯಾಪ್ತಿಯ ಬಗ್ಗೆ ಬರೆಯಿರಿ. ಕರಾರಿನ ಉಲ್ಲಂಘನೆ ಅಥವಾ ಒಪ್ಪಂದದ ಬಾಧ್ಯತೆಗಳ ಉಲ್ಲಂಘನೆಯ ಸಂಬಂಧವಾಗಿ ರಾಜ್ಯದ ಹೊಣೆಗಾರಿಕೆ ಏನಾದರೂ ಇದೆಯೆ ?

11/2

# 2005

## LAW

### Paper 2

*Time : 3 Hours ]* *[ Maximum Marks : 300*

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in about 50 words. Each question carries 5 marks.*

1. (a) Write a note on *mens rea* in statutory offences.

   (b) Define 'Tortious liability'.

   (c) Explain the essentials required for the formation of a valid contract.

   (d) Define a 'Contract of sale of goods'. In what way is it different from a 'Hire purchase agreement' ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಶಾಸನಾತ್ಮಕ ಅಪರಾಧಗಳಲ್ಲಿ 'ಅಪರಾಧಿಕ ಮನಸ್ಸು' ಕುರಿತು ಒಂದು ಟಿಪ್ಪಣಿ ಬರೆಯಿರಿ.

(ಬಿ) 'ಅಪಕೃತ್ಯ ಹೊಣೆಗಾರಿಕೆ' ಎಂದರೇನು ? ವಿವರಿಸಿ.

(ಸಿ) ಕಾನೂನುಮಾನ್ಯ ಒಪ್ಪಂದಕ್ಕೆ ಅವಶ್ಯಕವಾದ ಅಂಶಗಳನ್ನು ವಿವರಿಸಿ.

(ಡಿ) ಸರಕುಗಳ ಮಾರಾಟದ ಕರಾರನ್ನು ವಿವರಿಸಿ. ಇದು 'ಕಂತು ಖರೀದಿ ಒಪ್ಪಂದ'ದಿಂದ ಯಾವ ರೀತಿ ಭಿನ್ನ ? ವಿವರಿಸಿ.

[Turn over

## PART B

*10×10=100*

*Answer each question in atout 100 words. Each question carries 10 marks.*

1. Ramu is having his early morning walk on a public road. Kalu, showing a revolver, stops him. Ramu, for fear of his life, hands over his wrist watch, mobile phone and a gold chain to Kalu. Has Kalu committed any offence ? Elucidate.

2. Dr. Bilappa, working in a Government Hospital, performed tubectomy on Smt. Vinita, mother of two daughters of 5 years and $2\frac{1}{2}$ years of age. This was as part of a state-sponsored Family Planning Programme. After a year, Smt. Vinita gave birth to a female child. What relief can be claimed by Smt. Vinita and against whom ? Decide.

3. John lost his cell phone in a park. Jack found it and took it home. He thought of returning it to the owner, when the owner issued an advertisement giving his name, address, etc. But, in the mean time, it was stolen from his house, at night. John wants to claim the cost from Jack. Decide, giving reasons.

4. Vikas sold goods worth Rs. 5 lakhs to Vilas on credit of 1 month. The goods were sent through a carrier. Before the goods reached the destination, Vilas became insolvent, within a week after the sale. State the remedies available to Vikas. Can the receiver of the debtor-Vilas have any relief ?

5. The Government of Karnataka purchased 20 Maruti Esteem cars for its new Ministers, which were refused by the Ministers. Mr. Govinda, without authority, purchased one of them, for his principal Mr. Kapoor, at the auction sale conducted for the sale of these new cars, on 10.4.2005, subject to approval by his principal. But, on 12.4.2005, the auction sales were cancelled. On 14.4.2005, Mr. Kapoor approved the purchase made by Govinda. Explain, who has the ownership of the car.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

1. ರಾಮು ಎಂಬ ವ್ಯಕ್ತಿ ಒಂದು ಸಾರ್ವಜನಿಕ ರಸ್ತೆಯಲ್ಲಿ ಮುಂಜಾವದ ನಡಿಗೆ ಮಾಡುತ್ತಿದ್ದ. ಕಾಳು ಎಂಬಾತನು ರಾಮುವನ್ನು ತಡೆದು ನಿಲ್ಲಿಸಿ ರಿವಾಲ್ವರ್ ತೋರಿಸಿದ. ರಾಮು ಜೀವಭಯದಿಂದ, ತನ್ನ ಕೈಗಾಡಿಯಾರ, ಮೊಬೈಲ್ ದೂರವಾಣಿ ಹಾಗೂ ಚಿನ್ನದ ಸರವನ್ನು ಕಾಳುವಿಗೆ ಒಪ್ಪಿಸಿದ. ಕಾಳು ಇಲ್ಲಿ ಅಪರಾಧ ಮಾಡಿದನೆ ? ವಿಶ್ಲೇಷಿಸಿ.

2. ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದ ಡಾ. ಬೀಳಪ್ಪನವರು 5 ವರ್ಷ ಮತ್ತು $2\frac{1}{2}$ ವರ್ಷ ವಯಸ್ಸಿನ ಎರಡು ಹೆಣ್ಣು ಮಕ್ಕಳಿದ್ದ ಶ್ರೀಮತಿ ವಿನಿತಾ ಎಂಬಾಕೆಗೆ ಟ್ಯೂಬೆಕ್ಟಮಿ ಮಾಡುತ್ತಾರೆ. ರಾಜ್ಯವು ಪ್ರಾಯೋಜಿಸಿದ ಕುಟುಂಬ ಯೋಜನಾ ಕಾರ್ಯಕ್ರಮದ ಅಂಗವಾಗಿ ಇದನ್ನು ನಡೆಸಿರುತ್ತಾರೆ. ಒಂದು ವರ್ಷದನಂತರ ವಿನಿತಾ ಅವರು ಪುನಃ ಒಂದು ಹೆಣ್ಣು ಮಗುವಿಗೆ ಜನ್ಮ ಕೊಡುತ್ತಾರೆ. ಆಕೆ ಯಾವ ಪರಿಹಾರವನ್ನು ಕೋರಬಹುದು ಮತ್ತು ಯಾರ ವಿರುದ್ಧ ದೂರು ನೀಡಬೇಕು ? ನಿರ್ಧರಿಸಿ.

3. ಜಾನ್ ಎಂಬಾತನು ಒಂದು ಪಾರ್ಕಿನಲ್ಲಿ ತನ್ನ ಸೆಲ್‌ಫೋನ್ ಕಳೆದುಕೊಳ್ಳುತ್ತಾನೆ. ಜಾಕ್ ಎಂಬಾತನಿಗೆ ಅದು ಸಿಗುತ್ತದೆ. ಅವನು ತನ್ನ ಮನೆಗೆ ತೆಗೆದುಕೊಂಡು ಹೋಗುತ್ತಾನೆ. ಈ ಫೋನಿನ ಮಾಲಿಕ ತನ್ನ ಹೆಸರು, ವಿಳಾಸ ಇತ್ಯಾದಿಗಳನ್ನು ಕೊಟ್ಟು ಜಾಹಿರಾತು ನೀಡಿದಾಗ ಅದನ್ನು ಆತನಿಗೆ ಹಿಂದಿರುಗಿಸುವುದು ಜಾಕ್ ಉದ್ದೇಶವಾಗಿರುತ್ತದೆ. ಆದರೆ, ಈ ಮಧ್ಯೆ ಈ ಫೋನ್ ಅವನ ಮನೆಯಿಂದ ರಾತ್ರಿ ಹೊತ್ತಿನಲ್ಲಿ ಕಳುವಾಗುತ್ತದೆ. ಜಾಕ್ ಅದರ ವೆಚ್ಚವನ್ನು ನೀಡಬೇಕು ಎಂದು ಜಾನ್ ಬಯಕೆ. ಈ ಬಗ್ಗೆ ಕಾರಣಗಳನ್ನು ನೀಡಿ, ನಿರ್ಧಾರ ಮಾಡಿ.

4. ವಿಕಾಸ್ ಎಂಬಾತನು 5 ಲಕ್ಷ ರೂ. ಮೌಲ್ಯದ ಸರಕುಗಳನ್ನು 1 ತಿಂಗಳ ಉದ್ದರಿಯ ಮೇಲೆ ವಿಲಾಸ್‌ಗೆ ಮಾರುತ್ತಾನೆ. ಒಂದು ಸಾಗಣೆ ವಾಹನದ ಮೂಲಕ ಸರಕುಗಳನ್ನು ಕಳಿಸಿಕೊಡಲಾಗುತ್ತದೆ. ಈ ಸರಕುಗಳು ಗುರಿ ತಲುಪುವ ಮೊದಲೇ ವಿಲಾಸ್, ಮಾರಾಟದ ಒಂದೇ ವಾರದೊಳಗೆ ದಿವಾಳಿಯಾಗಿಬಿಡುತ್ತಾನೆ. ವಿಕಾಸ್‌ಗೆ ಯಾವ ಪರಿಹಾರಗಳು ಲಭ್ಯವಾಗುತ್ತವೆ ? ವಿವರಿಸಿ. ಸಾಲವನ್ನು ಪಡೆದ ವಿಲಾಸ್‌ಗೂ ಏನಾದರೂ ಪರಿಹಾರ ಸಿಗುವುದೆ ?

5. ಕರ್ನಾಟಕ ಸರ್ಕಾರವು ತನ್ನ ಹೊಸ ಸಚಿವರಿಗಾಗಿ 20 ಮಾರುತಿ ಎಸ್ಟೀಮ್ ಕಾರುಗಳನ್ನು ಖರೀದಿಸುತ್ತದೆ. ಅವುಗಳನ್ನು ಸಚಿವರು ನಿರಾಕರಿಸುತ್ತಾರೆ. ಈ ಕಾರುಗಳ ಮಾರಾಟಕ್ಕಾಗಿ ದಿನಾಂಕ 10.4.2005 ರಂದು ನಡೆದ ಹರಾಜಿನಲ್ಲಿ ಗೋವಿಂದ ಎಂಬಾತನು ತನ್ನ ಪ್ರಿನ್ಸಿಪಾಲರಾದ ಶ್ರೀ ಕಪೂರ್ ಎಂಬುವರಿಂದ ಅನುಮೋದನೆ ಪಡೆದುಕೊಳ್ಳುವ ಮೊದಲೇ ಯಾವುದೇ ಅಧಿಕಾರವಿಲ್ಲದೆ ಇದರಲ್ಲಿ ಒಂದು ಕಾರನ್ನು ಖರೀದಿಸುತ್ತಾನೆ. 12.4.2005 ರಂದು ಕಾರುಗಳ ಹರಾಜು ಮಾರಾಟ ರದ್ದಾಗುತ್ತದೆ. ಗೋವಿಂದ ಮಾಡಿದ ಖರೀದಿಗೆ ಕಪೂರ್ ಅವರು 14.4.2005 ರಂದು ಅನುಮೋದನೆ ನೀಡುತ್ತಾರೆ. ಕಾರಿನ ಮಾಲಿಕತ್ವ ಯಾರಿಗೆ ಸೇರುತ್ತದೆ ? ವಿವರಿಸಿ.

**6.** A landlord in a village, at the request of the villagers, allowed a portion of his land to be used as a burial ground. But, he did not allow the Daliths to use it. Does this amount to any offence under the Protection of Civil Rights Act, 1955 ? Give reasons.

**7.** A Food Inspector takes a sample of an article of food being sold by Narayan and sends it to the Public Analyst for analysis. As per the procedure, he ought to do so in the presence of one or more persons and take their signatures. But, he has taken the sample in the presence of a person working in his Department and taken his signature. The food article was adulterated. Narayan is convicted. Narayan challenges his conviction. Decide as per the Prevention of Food Adulteration Act.

**8.** Rajan agreed for the marriage of his son, Ranu with Reeta, daughter of Milind. Milind paid Rajan Rs. Two lakhs as dowry, before the wedding. The marriage did not materialise. Milind demanded the return of the Rs. two lakhs. Rajan refused. Can Milind sue for recovery, in a court of law ? Decide as per the Indian Contract Act and the Dowry Prohibition Act.

**9.** Thomas, the employer of Joseph, presents a cheque of Rs. 25,000 to Joseph on the occasion of Joseph's marriage. This is given because Joseph has been very useful to Thomas in his business. Shortly thereafter, Joseph leaves the employment. The cheque is dishonoured by the Bank. Advise as to the liability of Thomas and the rights of Joseph, as per the Negotiable Instruments Act.

**10.** Munna, aged $17\frac{1}{2}$ years, is admitted to the benefits of a partnership firm, 'A, B & Sons', of which Abraham and Balu are partners. Munna holds himself out as a partner and enters into a contract, on behalf of the firm, to purchase goods worth Rs. One lakh. The firm disowns the contract, saying Munna is a minor and is not the agent of the firm. Decide, with reference to the Indian Partnership Act.

**6.** ಒಂದು ಹಳ್ಳಿಯ ಭೂಮಾಲೀಕನೊಬ್ಬ, ಗ್ರಾಮಸ್ಥರ ಕೋರಿಕೆಯ ಮೇರೆಗೆ ತನ್ನ ಭೂಮಿಯ ಒಂದು ಭಾಗವನ್ನು ಸ್ಮಶಾನ ಭೂಮಿಯಾಗಿ ಬಳಸಿಕೊಳ್ಳಲು ಅನುಮತಿ ನೀಡುತ್ತಾನೆ. ಆದರೆ ಅದನ್ನು ಬಳಸುವುದಕ್ಕೆ ದಲಿತರಿಗೆ ಅವಕಾಶ ಕೊಡುವುದಿಲ್ಲ. 1955 ರ ಸಿವಿಲ್ ಹಕ್ಕುಗಳ ರಕ್ಷಣಾ ಕಾಯಿದೆ ಅನ್ವಯ ಇದು ಅಪರಾಧ ಎನಿಸಿಕೊಳ್ಳುತ್ತದೆಯೆ ? ಕಾರಣಗಳನ್ನು ತಿಳಿಸಿ.

**7.** ಒಬ್ಬ ಆಹಾರ ತನಿಖಾಧಿಕಾರಿಯು, ನಾರಾಯಣ ಎಂಬಾತನು ಮಾರಾಟಮಾಡುತ್ತಿದ್ದ ಆಹಾರ ವಸ್ತುವಿನ ಸ್ಯಾಂಪಲ್ ಅನ್ನು ವಿಶ್ಲೇಷಣೆಗಾಗಿ ಸಾರ್ವಜನಿಕ ವಿಶ್ಲೇಷಣಕಾರನಿಗೆ ಕಳಿಸುತ್ತಾನೆ. ರೂಢಿ ನಿಯಮದ ಪ್ರಕಾರ ಈ ಅಧಿಕಾರಿಯು ಒಬ್ಬರಿಗಿಂತ ಹೆಚ್ಚಿನ ಜನರ ಸಮಕ್ಷಮದಲ್ಲಿ ಈ ಸ್ಯಾಂಪಲನ್ನು ತೆಗೆದುಕೊಳ್ಳಬೇಕು ಮತ್ತು ಅವರ ಸಹಿಗಳನ್ನೂ ಪಡೆಯಬೇಕು. ಆದರೆ ಆತ, ತನ್ನ ಇಲಾಖೆಯಲ್ಲಿ ಕೆಲಸ ಮಾಡತ್ತಿದ್ದ ವ್ಯಕ್ತಿಯ ಸಮಕ್ಷಮದಲ್ಲಿ ಸ್ಯಾಂಪಲನ್ನು ತೆಗೆದುಕೊಳ್ಳುತ್ತಾನೆ ಮತ್ತು ಆತನ ಸಹಿ ಪಡೆದುಕೊಳ್ಳುತ್ತಾನೆ. ಆಹಾರವು ಕಲಬೆರಕೆಯದಾಗಿರುತ್ತದೆ. ನಾರಾಯಣನು ತಪ್ಪಿತಸ್ಥನೆಂದು ನಿರ್ಣಯಿಸಲಾಗುತ್ತದೆ. ಆದರೆ ಆತ ಈ ನಿರ್ಣಯವನ್ನು ಪ್ರಶ್ನಿಸುತ್ತಾನೆ. ಆಹಾರ ಕಲಬೆರಕೆ ತಡೆಗಟ್ಟುವ ಕಾಯಿದೆಯ ಪ್ರಕಾರ ಈ ವಿಷಯ ಕುರಿತು ನಿರ್ಧರಿಸಿ.

**8.** ರಾಜನ್, ತನ್ನ ಮಗ ರಾಣುವು ಮಿಲಿಂದ್ ಅವರ ಮಗಳು ರೀತೀಶ್‌ನ್ನು ಮದುವೆಯಾಗುವುದಕ್ಕೆ ಸಮ್ಮತಿಸುತ್ತಾರೆ. ಮದುವೆಗೆ ಮೊದಲು, ವರದಕ್ಷಿಣೆಯಾಗಿ ಮಿಲಿಂದ್ ಅವರು 2 ಲಕ್ಷರೂ.ಗಳನ್ನು ರಾಜನ್ ಅವರಿಗೆ ಕೊಡುತ್ತಾರೆ. ಆದರೆ ಈ ವಿವಾಹ ನಡೆಯುವುದಿಲ್ಲ. 2 ಲಕ್ಷ ರೂ. ಹಿಂದಿರುಗಿಸುವಂತೆ ಮಿಲಿಂದ್ ಕೇಳುತ್ತಾರೆ. ರಾಜನ್ ನಿರಾಕರಿಸುತ್ತಾರೆ, ನ್ಯಾಯಾಲಯದಲ್ಲಿ ಮಿಲಿಂದ್ ಅವರು ಮೊಕದ್ದಮೆ ಹೂಡಬಹುದೆ ? ಭಾರತೀಯ ಒಪ್ಪಂದ ಕಾಯಿದೆ ಮತ್ತು ವರದಕ್ಷಿಣೆ ನಿಷೇಧ ಕಾಯಿದೆಯ ಅನ್ವಯ ಇದನ್ನು ನಿರ್ಧರಿಸಿ.

**9.** ಜೋಸೆಫ್‌ನ ಉದ್ಯೋಗದಾತರಾದ ಥಾಮಸ್ ಅವರು ಜೋಸೆಫ್‌ನ ವಿವಾಹ ಸಂದರ್ಭದಲ್ಲಿ, ಅತನಿಗೆ 25,000/- ರೂ.ಗಳ ಚೆಕ್ ನೀಡುತ್ತಾರೆ. ಅವರ ವಹಿವಾಟಿನಲ್ಲಿ ಜೋಸೆಫ್ ಬಹಳ ಸಹಾಯ ಮಾಡಿದ್ದರಿಂದ ಅವರು ಈ ಚೆಕ್ ನೀಡಿರುತ್ತಾರೆ. ಕೆಲವೇ ದಿನಗಳಲ್ಲಿ ಜೋಸೆಫ್ ಕೆಲಸ ಬಿಡುತ್ತಾನೆ. ಬ್ಯಾಂಕಿನಲ್ಲಿ ಚೆಕ್ ತಿರಸ್ಕೃತವಾಗುತ್ತದೆ. ಇಲ್ಲಿ ಥಾಮಸ್‌ನ ಹೊಣೆಗಾರಿಕೆ ಏನು ಮತ್ತು ಜೋಸೆಫ್‌ನ ಹಕ್ಕುಗಳೇನು ? ತಿಳಿಸಿ. ವರ್ಗಾವಣೆಯ ಲಿಖಿತಗಳ ಕಾಯಿದೆ (Negotiable Instruments Act) ಯ ಹಿನ್ನೆಲೆಯಲ್ಲಿ ಇದನ್ನು ಪರಿಶೀಲಿಸಿ.

**10.** $17\frac{1}{2}$ ವರ್ಷದ ಮುನ್ನಾನನ್ನು A, B ಅಂಡ್ ಸನ್ಸ್ ಎಂಬ ಸಹಭಾಗಿತ್ವ ಸಂಸ್ಥೆಗೆ ಸೇರ್ಪಡೆ ಮಾಡಲಾಗುತ್ತದೆ. ಅಬ್ರಹಾಂ ಮತ್ತು ಬಾಲು ಇದರ ಪಾಲುದಾರರಾಗಿರುತ್ತಾರೆ. ಮುನ್ನ ತಾನೂ ಕೂಡ ಈ ಸಂಸ್ಥೆಯ ಪಾಲುದಾರ ಎಂದು ಪ್ರತಿಪಾದಿಸಿಕೊಂಡು ಒಂದು ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಖರೀದಿಸಲು ಸಂಸ್ಥೆಯ ಪರವಾಗಿ ಒಪ್ಪಂದ ಮಾಡಿಕೊಳ್ಳುತ್ತಾನೆ. ಆದರೆ ಸಂಸ್ಥೆಯು, ಮುನ್ನ ಅಪ್ರಾಪ್ತ ವಯಸ್ಕ ಮತ್ತು ಆತನು ಈ ಸಂಸ್ಥೆಯ ಏಜೆಂಟ್ ಅಲ್ಲ ಎಂದು ಹೇಳಿ ಈ ಒಪ್ಪಂದವನ್ನು ಅಲ್ಲಗಳೆಯುತ್ತದೆ. ಭಾರತೀಯ ಪಾಲುದಾರಿಕೆ ಕಾಯಿದೆಯ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ನಿರ್ಧರಿಸಿ.

[Turn over

## PART C

$6 \times 15 = 90$

*Answer each question in about 150 words. Each question carries 15 marks.*

**1.** Define and explain the offence of theft.

**2.** Discuss the elements required to constitute a tort of defamation.

**3.** Explain the circumstances under which an agreement can be vitiated on the ground of consent having been given under mistake. Refer to decided cases.

**4.** Explain 'Promissory note'. Distinguish it from a 'Cheque' and a 'Bill of Exchange'.

**5.** Discuss the rights and duties of the agent towards his principal.

**6.** Explain the principle of Vicarious Liability.

## ಭಾಗ C

6×15=90

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

ಕಳವಿನ ಅಪರಾಧವನ್ನು ವ್ಯಾಖ್ಯಾನಿಸಿ ಮತ್ತು ಅದರ ಬಗ್ಗೆ ವಿವರವಾಗಿ ಬರೆಯಿರಿ.

ಮಾನನಷ್ಟ ಅಪರಾಧ ಎನಿಸಿಕೊಳ್ಳಬೇಕಾದರೆ ಅದು ಯಾವ ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ ? ಚರ್ಚಿಸಿ.

ತಪ್ಪು ಗ್ರಹಿಕೆಯಿಂದಾಗಿ ಒಪ್ಪಿಗೆ ನೀಡಲಾಗಿತ್ತು ಎಂಬ ಆಧಾರದ ಮೇಲೆ ಒಂದು ಒಪ್ಪಂದವನ್ನು ನಿರರ್ಥಕಗೊಳಿಸಬಹುದಾದ ಸನ್ನಿವೇಶಗಳನ್ನು ವಿವರಿಸಿ. ಈ ಬಗ್ಗೆ ತೀರ್ಮಾನವಾಗಿರುವ ಪ್ರಕರಣಗಳನ್ನು ಉಲ್ಲೇಖಿಸಿ.

'ಪ್ರಾಮಿಸರಿ ಪತ್ರ' ಎಂದರೇನು ? 'ಚೆಕ್' ಮತ್ತು 'ಬಿಲ್ ಅಫ್ ಎಕ್ಸ್‌ಚೇಂಜ್'ಗಳಿಂದ ಇದು ಹೇಗೆ ಭಿನ್ನ ಎಂಬುದನ್ನು ಸ್ಪಷ್ಟಪಡಿಸಿ.

ತನ್ನ ಧಣಿಗೆ ಸಂಬಂಧಿಸಿದಂತೆ ಒಬ್ಬ ಏಜೆಂಟನ ಹಕ್ಕು ಮತ್ತು ಕರ್ತವ್ಯಗಳು ಯಾವುವು ? ಚರ್ಚಿಸಿ.

ಬದಲಿ ಹೊಣೆಯ ತತ್ವವನ್ನು ವಿವರಿಸಿ.

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

1. When is an offence of murder considered as culpable homicide not amounting to murder ? Explain.

2. Discuss the scope of duty of care to be taken in the light of the decision in Donoghue V Stevenson. Is this rule extended to repairers also ?

3. Discuss the principles by which damages for breach of contract are determined. Refer to case law.

4. Explain the scope of the terms 'Deficiency' and 'Consumer' under the Consumers Protection Act.

5. Define and explain 'Partnership'. How is it different from other business entities ?

3×30=90

## ಭಾಗ D

ಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.

ಒಂದು ಕೊಲೆಯ ಅಪರಾಧವನ್ನು ಯಾವಾಗ 'ಕೊಲೆಯೆನ್ನಿಸದ ಅಪರಾಧಿಕ ನರಹತ್ಯೆ' ಎಂದು ಪರಿಗಣಿಸಲಾಗುತ್ತದೆ ? ವಿವರಿಸಿ.

ಡೊನಾಗ್ V ಸ್ಟೀವನ್‌ಸನ್ ಪ್ರಕರಣದ ನಿರ್ಧಾರದ ಹಿನ್ನೆಲೆಯಲ್ಲಿ, "ಎಚ್ಚರಿಕೆ ವಹಿಸಬೇಕಾದ ಕರ್ತವ್ಯದ" ವ್ಯಾಪ್ತಿ ಕುರಿತು ಚರ್ಚಿಸಿ. ಈ ನಿಯಮವನ್ನು ದುರಸ್ತಿಗಾರರಿಗೂ ಅನ್ವಯಿಸಬಹುದೆ ?

ಒಪ್ಪಂದದ ಉಲ್ಲಂಘನೆಯ ನಷ್ಟಭರ್ತಿಗಳನ್ನು ಯಾವ ತತ್ವಗಳ ಪ್ರಕಾರ ನಿರ್ಣಯಿಸುತ್ತಾರೆ ? ಚರ್ಚಿಸಿ. ಪೂರ್ವಜನ್ಯ ಕಾನೂನನ್ನು ಉಲ್ಲೇಖಿಸಿ.

ಗ್ರಾಹಕರ ರಕ್ಷಣಾ ಕಾಯಿದೆಯ ಕೆಳಗೆ 'ಕೊರತೆ' ಮತ್ತು 'ಗ್ರಾಹಕ' ಎಂಬ ಪದಗಳ ವ್ಯಾಪ್ತಿಯೇನು ? ವಿವರಿಸಿ.

'ಪಾಲುಗಾರಿಕೆ' ಎಂಬ ಪದದ ವ್ಯಾಖ್ಯೆಯನ್ನು ತಿಳಿಸಿ ಮತ್ತು ಅದರ ಬಗ್ಗೆ ವಿವರವಾಗಿ ಬರೆಯಿರಿ. ಇದು ಇತರ ವ್ಯಾಪಾರ ವ್ಯವಸ್ಥೆಗಳಿಂದ ಹೇಗೆ ಭಿನ್ನ ಎಂಬುದನ್ನು ಸ್ಪಷ್ಟಪಡಿಸಿ.